**ದಿನಾಂಕ:20.04.2018**

## ‘ತಪಸ್’ ಅಂತಿಮ ಆಯ್ಕೆ ಶಿಬಿರದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಪೋಷಕರಿಗೆ ಪತ್ರ

ಆತ್ಮೀಯರಿಗೆ ನಮಸ್ತೆ.

ಇಂದು ಪ್ರಕಟವಾಗಿರುವ ಈ ಕೆಳಕಂಡ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳು ಅಂತಿಮವಾಗಿ **“ತಪಸ್”** ಪ್ರಕಲ್ಪಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಗಳಿಗೆ 2018-20ರ ಎರಡು ವರ್ಷಗಳ ಪಿ.ಯು.ಸಿ. ಹಾಗೂ IIT ಪ್ರವೇಶ ಪರೀಕ್ಷೆಗೆ ತರಬೇತಿ ಉಚಿತವಾಗಿ ಲಭ್ಯವಾಗಲಿದೆ. 27.4.2018 **ರಂದು** ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಲಿವೆ, ಆದಕಾರಣ 27.04.2018 ರಂದು ಶುಕ್ರವಾರ ಬೆಳಿಗ್ಗೆ 9.00 ಗಂಟೆಯೊಳಗೆ **ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪ, ಕೆಂಪೇಗೌಡನಗರ, ಬೆಂಗಳೂರು – 560 019** ಗೆ ಬಂದು ನೋಂದಣಿ ಮಾಡಿಕೊಳ್ಳುವುದು. 10.30 ಕ್ಕೆ ಬನಶಂಕರಿಯ “ತಪಸ್” ಕೇಂದ್ರದಲ್ಲಿ ಉದ್ಘಾಟನಾ ಕಾರ್ಯಕ್ರಮವಿರುತ್ತದೆ.

**ವಿದ್ಯಾರ್ಥಿಯು ಹಾಸ್ಟೆಲ್‌ಗೆ ಬರುವಾಗ ಈ ಕೆಳಕಂಡ ವಸ್ತುಗಳನ್ನು ತೆಗೆದುಕೊಂಡು ಬರುವುದು.**

- ದಿನನಿತ್ಯಕ್ಕೆ ಉಪಯೋಗವಾಗುವ ಉಡುಪುಗಳು (ಕನಿಷ್ಠ ಸಂಖ್ಯೆಯಲ್ಲಿರಲಿ) ರಾತ್ರಿ ಉಪಯೋಗಕ್ಕೆ ಎರಡು ಜೊತೆ ಪೈಜಾಮಗಳಿದ್ದಲ್ಲಿ ಒಳ್ಳೆಯದು.
- ಜೀನ್ಸ್ ಪ್ಯಾಂಟ್, ಬರ್ಮೊಡಾ ತರಹದ ಚಡ್ಡಿಗಳು, ಪ್ರಿಟೆಂಡ್ ಟೀ ಷರ್ಟ್‌ಗಳನ್ನು ಕಡ್ಡಾಯವಾಗಿ ತರುವಂತಿಲ್ಲ. ಒಂದು ಜೊತೆಗಿಂತ ಹೆಚ್ಚಿನ ಷೂ ಹಾಗೂ ಚಪ್ಪಲಿಗಳನ್ನು ತರುವಂತಿಲ್ಲ.
- ಕಡ್ಡಾಯವಾಗಿ ಬಿಳಿ ಪಂಚೆ, ಪೂರ್ಣತೋಳಿನ ಬಿಳಿ ಶರ್ಟ್ ತರುವುದು.
- ವಿದ್ಯಾರ್ಥಿಯ ರೂ.5,000/- ಹಣವನ್ನು ನೋಂದಣಿ ಸಮಯದಲ್ಲಿ ಜಮಾ ಮಾಡುವುದು. (ರೂ.3000/- ಭದ್ರತಾ ಠೇವಣಿ ಹಾಗೂ ರೂ.2000/- ಗಳಲ್ಲಿ ಅವನಿಗೆ ಅಗತ್ಯವಾದ ಟೂತ್ ಪೇಸ್ಟ್-ಬ್ರಷ್, ಸಾಬೂನು, ಔಷಧಿಗಳು, ಪೆನ್, ಪೆನ್ಸಿಲ್, ಜಾಮಿಟ್ರಿ ಬಾಕ್ಸ್, ವರ್ಕ್‌ಶೀಟ್ಸ್, ಇತ್ಯಾದಿಗಳನ್ನು ಕೊಂಡು ಕೊಡಲಾಗುವುದು.) ಈ ಹಣ ಪೂರ್ಣಖರ್ಚಾದಲ್ಲಿ ಮತ್ತೆ ಜಮಾ ಮಾಡಬೇಕಾಗುವುದು.
- ವೈದ್ಯಕೀಯ ಪ್ರಮಾಣ ಪತ್ರ (Medical Certificate)
- ವಿದ್ಯಾರ್ಥಿಯ ಪಾಸ್‌ಪೋರ್ಟ್ ಸೈಜಿನ ಫೋಟೋ-10, ಸ್ಟಾಂಪ್ ಸೈಜಿನ ಫೋಟೋ- 10

**ತಪಸ್ ಪ್ರಕಲ್ಪದಿಂದ ನೀಡಲಾಗುವ ವಸ್ತುಗಳು:**

- ಹಾಸಿಗೆ, ಹಾಸು, ದಿಂಬು, ಹೊದಿಕೆ, ಕಂಬಳಿ, ಅಲ್ಮೇರಾ.
- ಅಗತ್ಯವಾದ, ಸಮವಸ್ತ್ರ, ನೋಟ್-ಪುಸ್ತಕಗಳು, ಪಠ್ಯ ಪುಸ್ತಕಗಳು, ಬ್ಯಾಗ್ ಹಾಗೂ ಗ್ರಂಥಾಲಯ ವ್ಯವಸ್ಥೆ

**ತಪಸ್ ಪ್ರಕಲ್ಪಕ್ಕೆ ತರಬಾರದ ವಸ್ತುಗಳು:**

- ಮೊಬೈಲ್, ಲ್ಯಾಪ್‌ಟಾಪ್‌ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳು
- ಬೆಲೆಬಾಳುವ ವಸ್ತುಗಳು, ಹಣ ಹಾಗೂ ತಿಂಡಿ ಪದಾರ್ಥಗಳು

“ತಪಸ್” ನ ಎಲ್ಲ ನೀತಿ, ನಿಯಮಗಳಿಗೆ ವಿದ್ಯಾರ್ಥಿ ಬದ್ಧನಾಗಿರಬೇಕು.

**ವಿಶೇಷ ಸೂಚನೆ: ದಿನಾಂಕ:27.04.2018 ರ ನಂತರ ಬರುವವರಿಗೆ ತಪಸ್ ಪ್ರಕಲ್ಪಕ್ಕೆ ಪ್ರವೇಶವಿಲ್ಲ.**

ಸಂಯೋಜಕರು